# ಅಪೀಲು ಸ್ಥಾಯಿ ಸಮಿತಿ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:07-08-2015ರ ನಡವಳಿಗಳು

## ವಿಷಯದ ಸಂಖ್ಯೆ: ಅಸ್ಥಾಸ/(ತೆ)/06/2015-16

**ನಡುವೆ:**

| ವಾದಿ (Appellant) | ಪ್ರತಿವಾದಿ (Respondent) |
| --- | --- |
| ಶ್ರೀ. ಎ.ಡಿ.ವೆಂಕಟೇಶ್ ಮತ್ತು ಜಿ.ಶರತ್‌ರೆಡ್ಡಿ<br>ನಂ.2/2, 1ನೇ ಮುಖ್ಯರಸ್ತೆ,<br>ಕೈಗಾರಿಕಾ ನಗರ, 6ನೇ ಬ್ಲಾಕ್,<br>ರಾಜಾಜಿನಗರ,<br>ಬೆಂಗಳೂರು-560 044. | ಸಹಾಯಕ ಕಂದಾಯ ಅಧಿಕಾರಿ,<br>ಗೋವಿಂದರಾಜನಗರ ಉಪ ವಿಭಾಗ,<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,<br>ಬೆಂಗಳೂರು. |

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಡಾ|| ರಾಜ್‌ಕುಮಾರ್, ವಾರ್ಡ್ ಸಂಖ್ಯೆ:106 ರಲ್ಲಿ ಬರುವ ಆಸ್ತಿ ಸಂಖ್ಯೆ:2/2, 1ನೇ ಮುಖ್ಯರಸ್ತೆ, ಇಂಡಸ್ಟ್ರಿಯಲ್ ಟೌನ್, ಈ ಸ್ವತ್ತಿನ ಖಾತಾದಾರರು 2008-09ನೇ ಸಾಲಿನಲ್ಲಿ ಸ್ವತ್ತಿನ ನಿವೇಶನದ ಅಳತೆ 13878 ಚದರ ಅಡಿಗಳೆಂದು, ನೆಲ, 1ನೇ, 2ನೇ ಅಂತಸ್ತಿನ ಕಟ್ಟಡವನ್ನು ಒಟ್ಟು 11600 ಚದರ ಅಡಿಗಳೆಂದು 10100 ಚದರ ಅಡಿಗಳ ಸ್ವತ್ತನ್ನು ಸ್ವಂತ ಉಪಯೋಗಕ್ಕೆ ಮತ್ತು 1500 ಚದರ ಅಡಿಗಳ ಭಾಗವನ್ನು ಬಾಡಿಗೆಗೆ ಎಂದು ಕಂದಾಯ ವಾರ್ಷಿಕ ಮೌಲ್ಯ ರೂ.3,19,500/- (ವಸತಿಯೇತರ) ಗಳಿಗೆ ನಿಗಧಿಪಡಿಸಿಕೊಂಡು ಕಂದಾಯವನ್ನು ಪಾವತಿ ಮಾಡಿರುತ್ತಾರೆ.

ಮುಂದುವರೆದಂತೆ, ಕಂದಾಯ ಪರಿವೀಕ್ಷಕರು ಸ್ಥಳ ಪರಿಶೀಲನೆ ಮಾಡಿದ್ದು, ಸದರಿ ಸ್ವತ್ತಿನಲ್ಲಿ 13878 ಅಡಿಗಳ ನಿವೇಶನದಲ್ಲಿ ನೆಲ ಅಂತಸ್ತು-9477, 1ನೇ ಅಂತಸ್ತು-4251, 2ನೇ ಅಂತಸ್ತು 4100 ಚದರ ಅಡಿಗಳ ಸ್ವತ್ತನ್ನು ವಸತೀಯೇತರಕ್ಕೆ ಸ್ವಂತ ಮತ್ತು ಬಾಡಿಗೆಗೆ ಉಪಯೋಗಿಸುತ್ತಿದ್ದಾರೆಂದು, ಇದರಲ್ಲಿ 6382 ಚದರ ಅಡಿಗಳ ಸ್ವತ್ತನ್ನು ಕೈಗಾರಿಕೆ ಸ್ವಂತಕ್ಕಾಗಿ ಮತ್ತು 2693 ಚದರ ಅಡಿಗಳ ಸ್ವತ್ತನ್ನು ಕೈಗಾರಿಕೆ ಬಾಡಿಗೆಗಾಗಿ ಕಂಡು ಬಂದಿರುವ ಕಾರಣ ಕಂದಾಯ ವಾರ್ಷಿಕ ಮೌಲ್ಯ ರೂ.4,94,634/- (ವಸತಿಯೇತರ) ಗಳಿಗೆ ದಿನಾಂಕ: 01-04-2008 ರಿಂದ ಜಾರಿಗೆ ಬರುವಂತೆ ಕಂದಾಯವನ್ನು ಪರಿಷ್ಕರಣೆ ಮಾಡಲಾಗಿರುತ್ತದೆ.

ಈ ಬಗ್ಗೆ ದಿನಾಂಕ:22-11-2013 ರಂದು ಅರ್ಜಿದಾರರು ಕಂದಾಯ ಪರಿಷ್ಕರಣೆ ವಿರುದ್ಧ ಅಪೀಲನ್ನು ಸಲ್ಲಿಸಿದ್ದು, ಪ್ರಥಮ ಅಪೀಲು ಅಧಿಕಾರಿಗಳು ಹಾಗೂ ಜಂಟಿ ಆಯುಕ್ತರು (ಪ) ರವರು ಸದರಿ ಅಪೀಲು ಕಾಲಮಿತಿಯಲ್ಲಿಲ್ಲವೆಂದು ತಿರಸ್ಕರಿಸಿರುತ್ತಾರೆ.

ಜಂಟಿ ಆಯುಕ್ತರು (ಪಶ್ಚಿಮ) ರವರ ಆದೇಶದ ವಿರುದ್ಧ ಸ್ವತ್ತಿನ ಖಾತಾದಾರರು ಅಪೀಲು ಸ್ಥಾಯಿ ಸಮಿತಿಗೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಕಡತವನ್ನು ಸಮಿತಿಯ ಮುಂದೆ ಮಂಡಿಸಲು ಸ್ಥಾಯಿ ಸಮಿತಿ ಅಧ್ಯಕ್ಷರು ಕೋರಿರುತ್ತಾರೆ.

.......................2

ಪ್ರಸ್ತಾಪಿತ ವಿಷಯದ ಬಗ್ಗೆ ಪೂರ್ಣ ಕಡತದೊಂದಿಗೆ ಆಡಳಿತಗಾರರ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:04–07–2015ರ ಟಿಪ್ಪಣಿ.

## ಆದೇಶ

ಪ್ರಕರಣ ಕರೆಸಲಾಯಿತು. ಉಭಯತರರು ಹಾಜರ್. ಸದರಿ ಪ್ರಕರಣದಲ್ಲಿ ಕೆ.ಎಂ.ಸಿ.ಕಾಯ್ದೆ ಕಲಂ 108–A(13)ರ ಪ್ರಕಾರ ಪರಿಷ್ಕೃತ ಬೇಡಿಕೆ ನೋಟಿಸ್‌ನ ವಿರುದ್ಧ ಸಲ್ಲಿಸಿದ ಆಕ್ಷೇಪಣೆಗಳನ್ನು ಆಯುಕ್ತರು/ಜಂಟಿ ಆಯುಕ್ತರು ಪರಿಗಣಿಸಬೇಕು.

ಪ್ರಸ್ತುತ ಪ್ರಕರಣದಲ್ಲಿ ವಿಳಂಬವಾಗಿ ಸಲ್ಲಿಸಿದ್ದರಿಂದ ಆಕ್ಷೇಪಣೆಯನ್ನು ತಿರಸ್ಕರಿಸಲಾಗಿದೆ. ಆದರೆ ಅವರಿಗೆ ನೋಟೀಸು ಜಾರಿ ಆಗಿದ್ದು ದಿನಾಂಕ:21–10–2013 ರಂದು, ಮೇಲ್ಮನವಿದಾರರು ಈ ಬಗ್ಗೆ ಹೆಚ್ಚಿನ ಮಾಹಿತಿ ಕೇಳಿ ದಿನಾಂಕ:19–11–2013 ರಂದು ಪತ್ರ ನೀಡಿದ್ದಾರೆ.

ಆದ್ದರಿಂದ ನಿಗದಿತ 30 ದಿನಗಳೊಳಗೆ ಮಾಹಿತಿ ಕೇಳಿದ್ದು, ಇದರಲ್ಲಿ ವಿಳಂಬವಾಗಿದೆ ಎಂದು ಪರಿಗಣಿಸಲಾಗದು. ಈ ಹಿನ್ನಲೆಯಲ್ಲಿ ಜಂಟಿ ಆಯುಕ್ತರು ಸದರಿ ಪ್ರಕರಣದಲ್ಲಿ ಮೇಲ್ಮನವಿದಾರರು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಗಣಿಸಿ ಅವರಿಗೆ ಸೂಕ್ತ ಅವಕಾಶ ನೀಡಿ ತೀರ್ಮಾನ ತೆಗೆದುಕೊಳ್ಳಲು ನಿರ್ದೇಶಿಸಿದೆ. ಅವರಿಗೆ ಪ್ರಕರಣ ಹಿಂತಿರುಗಿಸಿದೆ.

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು